# ಧರೆ ಹತ್ತಿ ಉರಿದೊಡೆ...

‘ಗಂಡು ಹೆಣ್ಣುಗಳಲ್ಲಿ ಹೆಣ್ಣೇ ಉದಾರತ್ವವಾದುದು: ಏಕೆಂದರೆ ಇಂದಿಗೂ ಅದು ತ್ಯಾಗದ, ಮೂಕ ಕ್ಲೇಶಾನುಭವದ, ನಮ್ರತೆಯ, ಶ್ರದ್ಧೆಯ ಮತ್ತು ಜ್ಞಾನದ ಸಾಕಾರ ರೂಪವಾಗಿದೆ. ಅವಳ ಆರೈಕೆಯಿಲ್ಲದಿದ್ದರೆ ಜನಾಂಗವೇ ನಿರ್ನಾಮವಾಗಬೇಕಾಗುತ್ತದೆ’ ಹೀಗೆಂದು ಗಾಂಧೀಜಿ ಹೇಳಿದ್ದರು. ಆದರೆ ಮನುಕುಲದ ವೃದ್ಧಿಗೆ ಕಾರಣವಾಗಿರುವ ಹೆಣ್ಣಿನ ಬಗ್ಗೆ ಭಾರತೀಯ ಸಮಾಜ ತಳೆದಿರುವ ನಿಲುವು ಆತ್ಮಘಾತುಕವಾದದ್ದು. ಕೃಷಿ, ಕರಕುಶಲ ಕಲೆ ಹಾಗೂ ಹೈನುಗಾರಿಕೆಯ ಮೂಲಕ ದೇಶದ ಆರ್ಥಿಕ ಸಮತೋಲನಕ್ಕೆ ದೊಡ್ಡ ಕೊಡುಗೆ ನೀಡಿರುವ ಮಹಿಳಾ ಸಮುದಾಯವನ್ನು ಎಲ್ಲ ಕ್ಷೇತ್ರಗಳಿಂದ ನಿರಂತರವಾಗಿ ದೂರ ಇಟ್ಟಿರುವ ಬಗ್ಗೆ ಪುರುಷ ಸಮಾಜಕ್ಕೆ ಇನ್ನೂ ಪಶ್ಚಾತ್ತಾಪವಾಗುತ್ತಿಲ್ಲ!

ದೇಶದಲ್ಲಿ ಈಚೆಗೆ ಸಾಂಕ್ರಾಮಿಕ ರೋಗದಂತೆ ಉಲ್ಬಣವಾಗುತ್ತಿರುವ ಅತ್ಯಾಚಾರ ಮತ್ತು ಹತ್ಯೆಯಂಥ ಘೋರ ಕೃತ್ಯಗಳು ಯಾವ ಎಗ್ಗೂ ಇಲ್ಲದೆ ನಡೆಯುತ್ತಿರುವುದು ಸಮಾಜಕ್ಕೆ ಶೋಭೆ ತರುವಂಥದ್ದಲ್ಲ! ವರದಕ್ಷಿಣೆ, ಅಂತರ್ಜಾತಿ ಮತ್ತು ಅಂತರ್‌ಧರ್ಮೀಯ ವಿವಾಹ ಮುಂತಾದ ಸಂದರ್ಭಗಳಲ್ಲಿ ಸಮಾಜದ ಕ್ರೌರ್ಯಕ್ಕೆ ಮೊದಲು ಜೀವತೆರುವವರು ಮಹಿಳೆಯರೇ ಆಗಿದ್ದಾರೆ. ಕಾಯಿದೆ ಅಥವಾ ಕಾನೂನು, ಶಿಕ್ಷೆಗಳು ಕೇವಲ ಬಡವರಿಗೆ ಮಾತ್ರ ಎಂಬಂತಾಗಿದೆ. ಇಂತಹ ಹೀನ ಕೃತ್ಯಗಳನ್ನು ಪ್ರತಿರೋಧಿಸುವ ಶಕ್ತಿಯನ್ನು ಮಹಿಳೆಯರು ತಮ್ಮೊಳಗಿನಿಂದಲೇ ಪಡೆಯುವುದು ಒಂದು ವಿಧವಾದರೆ, ಸಂವಿಧಾನ, ಕಾನೂನಿನ ಮೂಲಕ ಪಡೆಯುವುದು ಇನ್ನೊಂದು ವಿಧ. ಈ ಎರಡೂ ಮುಖ್ಯವೆ. ಆದ್ದರಿಂದಲೇ ಗಾಂಧೀಜಿ ಹೇಳಿದ್ದು ‘ತನ್ನ ಮಾನವನ್ನು ರಕ್ಷಿಸಿಕೊಳ್ಳುವುದಕ್ಕಾಗಿ ತನ್ನ ಮನಸ್ಸಿಗೆ ತೋರಿದ ಎಲ್ಲ ವಿಧಾನಗಳನ್ನೂ, ಸಾಧನಗಳನ್ನೂ ಉಪಯೋಗಿಸುವ ಸ್ವಾತಂತ್ರ್ಯ ಅವಳಿಗೆ ಉಂಟು. ಅವಳಿಗೆ ಉಗುರುಗಳನ್ನೂ ಹಲ್ಲುಗಳನ್ನೂ ದೇವರು ಕೊಟ್ಟಿದ್ದಾನೆ. ತನ್ನ ಸಮಗ್ರ ಶಕ್ತಿಯಿಂದ ಅವುಗಳಿಂದ ಆಕೆ ಉಪಯೋಗಿಸಬೇಕು’.

ಆದರೆ ಭಾರತೀಯ ಸಮಾಜದಲ್ಲಿ ಸಾಮಾನ್ಯವಾಗಿ ಎರಡು ಮಾದರಿಯ ಮಹಿಳೆಯರು ಕಂಡುಬರುತ್ತಾರೆ: ಮೊದಲನೆಯದು; ನಮ್ಮ ಜನಪದ ಸಾಹಿತ್ಯದಲ್ಲಿ ಬರುವ ‘ಕೆರೆಗೆ ಹಾರ’ದ ಭಾಗೀರತಿಯಂಥವರು. ತನ್ನ ಮಾವನ ಕುಟುಂಬದವರು ತನ್ನನ್ನು ಕೆರೆಗೆ ಹಾರ ಕೊಡಲೆಂದು ತೀರ್ಮಾನಿಸಿದಾಗ ಅದಕ್ಕೆ ಯಾವ ಪ್ರತಿರೋಧವನ್ನೂ ಒಡ್ಡದೆ, ಮಾವನ ಮನೆಯವರ ನಿರ್ಧಾರಕ್ಕೆ ಮೂಗೊಪ್ಪಿಗೆ ನೀಡಿ ಕೆರೆಗೆ ಬಲಿಯಾಗುವುದು. ಇಂತಹ ಸಮಾಜದಲ್ಲಿ ಪುರುಷಾಧಿಕಾರವನ್ನು ಧಿಕ್ಕರಿಸುವ ಹೆಣ್ಣುಗಳ ಸಂಖ್ಯೆ ಕಡಿಮೆಯೆಂದೇ ಹೇಳಬೇಕು! ಇವೆಲ್ಲಾ ಭಾರತದ ಜಾತಿವ್ಯವಸ್ಥೆ ರೂಪಿಸಿರುವ ಕರಾಳ ಮುಖಗಳು. ವಿಮೋಚನೆಯ ಬೆಳಕಿಲ್ಲದ ಇಂತಹ ಸಾಂಪ್ರದಾಯಿಕ ಸಮಾಜಗಳಲ್ಲಿ ಬದಲಾವಣೆಯ ನದಿಗಳು ಹರಿಯುವುದೇ ಇಲ್ಲ! ಮಹಿಳೆಯರನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಧರ್ಮ, ಶಾಸ್ತ್ರಗಳ ಮೂಲಕ ನಿಯಮಗಳನ್ನು ರೂಪಿಸಿರುವುದು ಪುರುಷರೇ ಆಗಿರುವುದರಿಂದ, ಮಹಿಳೆಯರ ಬಿಡುಗಡೆಯ ಹಾದಿಗಳನ್ನೂ ಅವರೇ ಮುಚ್ಚಿಬಿಟ್ಟಿದ್ದಾರೆ. ಇದರ ಜೊತೆಗೆ ಶಿಕ್ಷಣ, ಆಧ್ಯಾತ್ಮಿಕತೆ ಮುಂತಾದ ಜ್ಞಾನ ಮಾರ್ಗಗಳಿಂದಲೂ ಮಹಿಳೆಯರನ್ನು ದೊಡ್ಡ ಪ್ರಮಾಣದಲ್ಲಿ ದೂರವಿಟ್ಟಿದ್ದರಿಂದಲೇ ಭಾರತದಲ್ಲಿ ಮಹಿಳಾ ತತ್ತ್ವಜ್ಞಾನಿಗಳು, ದಾರ್ಶನಿಕರು, ಕವಯತ್ರಿಯರು ದೊಡ್ಡಸಂಖ್ಯೆಯಲ್ಲಿ ಬರಲೇ ಇಲ್ಲ.

ಇನ್ನು ಎರಡನೆಯ ಮಾದರಿಗಳೆಂದರೆ; ಅಕ್ಕಮಹಾದೇವಿಯನ್ನೂ ಒಳಗೊಂಡು ಇತರ ಕೆಳಜಾತಿಗಳಲ್ಲಿ ಕಾಣಿಸಿಕೊಂಡ ವಚನಕಾರ್ತಿಯರನ್ನು ಹಾಗೂ ಲಲ್ಲೇಶ್ವರಿಯಂತಹವರನ್ನು ಹೆಸರಿಸಬಹುದು. ಆದರೆ ನಮ್ಮ ಜ್ಞಾನ ಕೇಂದ್ರಗಳಲ್ಲಿ, ಪಂಡಿತರ ಚರ್ಚೆಗಳಲ್ಲಿ ಪುರುಷ ವಚನಕಾರರಿಗೆ ಸಿಕ್ಕಷ್ಟು ಆದ್ಯತೆ ಮತ್ತು ವಿಶ್ಲೇಷಣೆಯ ಅವಕಾಶ ಮಹಿಳಾ ವಚನಕಾರ್ತಿಯರಿಗೆ ಸಿಕ್ಕಿಲ್ಲ ಎನ್ನುವುದು ಸೋಜಿಗದ ಸಂಗತಿ. ಆದರೆ ಇಂಥ ದಿಟ್ಟ ಮಹಿಳೆಯರ ಸಂಖ್ಯೆ ಅತಿ ವಿರಳ. ಆದರೂ ಇಂತಹವರು ಪುರುಷ ಸಮಾಜದ ಕಟ್ಟಲೆಗಳಿಂದ ಬಿಡುಗಡೆಗಾಗಿ ಮಾಡಿದ ಪ್ರಯತ್ನಗಳು ಕಿರುದೀಪಗಳಾಗಿ ಗೋಚರಿಸುತ್ತವೆ. ಎಲ್ಲಿಯವರೆಗೆ ಮಹಿಳೆಯರು ಬಿಡುಗಡೆಗೊಳ್ಳುವುದಿಲ್ಲವೋ ಅಲ್ಲಿಯವರೆಗೆ ಭಾರತ ಸುಖೀ ದೇಶವಾಗದು! ಎಂದು ರಾಮಮನೋಹರ ಲೋಹಿಯಾ ಹಿಂದೆಯೇ ಎಚ್ಚರಿಸಿದ್ದರು.

ಮಹಿಳೆಯರನ್ನು ಜಾತಿ ವ್ಯವಸ್ಥೆಯಲ್ಲಿ ಬಂಧಿಸಿಡಲು, ಭಾರತದ ಜಾತಿ ವ್ಯವಸ್ಥೆ ತಾನೇ ಹುಡುಕಿಕೊಂಡಿರುವ ಇನ್ನೂ ಹಲವಾರು ಹೇಯ ದಾರಿಗಳೂ ಇವೆ. ಅವುಗಳಲ್ಲಿ ಈಚೆಗೆ ಕಂಡುಬರುತ್ತಿರುವ ‘ಮರ್ಯಾದೆಗೇಡು ಹತ್ಯೆ’ ಎನ್ನುವ ಹೊಸ ಭೀಭತ್ಸ ಆಯುಧ. ತಮ್ಮ ಜಾತಿಯ ಹೆಣ್ಣು ಸಾಮಾಜಿಕವಾಗಿ ತಮಗಿಂತ ಕೆಳಸ್ಥಾನದಲ್ಲಿರುವ ಹುಡುಗನೊಡನೆ ವಿವಾಹವಾಗಲು ಮುಂದಾದಾಗ, ಹೆಣ್ಣಿನ ತಂದೆ–ತಾಯಿಗಳೇ ಆ ಹೆಣ್ಣನ್ನು ನಿರ್ದಯವಾಗಿ ಹತ್ಯೆ ಮಾಡುವ ಶಿಕ್ಷಾ ವಿಧಾನವನ್ನು ಕಂಡುಕೊಂಡಿದ್ದಾರೆ. ಇದಕ್ಕೆ ಈಗಿನ ‘ಸಭ್ಯ’ ಸಮಾಜ ‘ಮರ್ಯಾದಾ ಹತ್ಯೆ’ ಎಂದು ಹೆಸರಿಟ್ಟಿದೆ! ಇದು ಯಾವ ಬಗೆಯ ‘ಮರ್ಯಾದೆ’ ಎನ್ನುವುದನ್ನು ಆ ಹೆತ್ತವರೇ ಹೇಳಬೇಕು. ಹೆಣ್ಣುಮಕ್ಕಳ ವೈಯಕ್ತಿಕ ಆಯ್ಕೆಯ ಹಕ್ಕಿನ ಮೇಲೆ ನಡೆಸುವ ಈ ಆಕ್ರಮಣಗಳು ಅತ್ಯಂತ ಹೀನವಾದದ್ದು. ಮಾನವ ಘನತೆಯ ಕೋಷ್ಟಕದಲ್ಲಿ ಇವುಗಳಿಗೆ ಯಾವುದೇ ಸ್ಥಾನವಿಲ್ಲ. ಸಲಹ ಬೇಕಾದ ಕೈಗಳೇ ತಮ್ಮ ಕುತ್ತಿಗೆಯನ್ನು ಹಿಸುಕಿ ಕೊಲ್ಲುವುದಾದರೆ, ಅಂತಹ ಹೆಣ್ಣುಮಕ್ಕಳು ಯಾರ ಮೊರೆ ಹೋಗಬೇಕು? ‘...ತಾಯ ಮೊಲೆವಾಲು ನಂಜಾಗಿ ಕೊಲುವಡೆ ಇನ್ನಾರಿಗೆ ದೂರುವೆ ಕೂಡಲ ಸಂಗಮದೇವಾ’ ಗಮನಿಸಬೇಕಾದ ಅಂಶವೆಂದರೆ, ಈ ಹತ್ಯೆಗೆ ಕೊರಳೊಡ್ಡುವವರೆಲ್ಲ ಬರೀ ಹೆಣ್ಣುಮಕ್ಕಳೆ! ಗಂಡುಮಕ್ಕಳು ಎಲ್ಲ ಕಾಲಕ್ಕೂ ಸುರಕ್ಷಿತ! ಇಂತಹ ಹತ್ಯೆ ನಡೆಸುವ ಕುಟುಂಬಗಳನ್ನು ಸಾಮಾಜಿಕವಾಗಿ ಹೊರಗಿಡಬೇಕು.

ತಾವೇ ಹೆತ್ತಮಕ್ಕಳಿಗೆ ಮರಣದಂಡನೆ ವಿಧಿಸುವ ಪೋಷಕರ ಈ ಮನಸ್ಥಿತಿ ಎಂತಹುದು? ಇದಕ್ಕೆಲ್ಲಾ ಇರುವ ಉತ್ತರವೆಂದರೆ, ಅದು ಶ್ರೇಣೀಕೃತ ಜಾತಿಯ ಬಗ್ಗೆ ಇರುವ ಮೇಲರಿಮೆ ಮತ್ತು ಕೆಳಜಾತಿಗಳ ಬಗೆಗೆ ಇರುವ ಕೀಳು ಮನಸ್ಥಿತಿ. ಜೊತೆಗೆ ಹಣ ಮತ್ತು ಹುಸಿ ಪ್ರತಿಷ್ಠೆಯೇ ಕಾರಣ. ಆದ್ದರಿಂದಲೇ ಭಾರತೀಯ ಹೆಣ್ಣುಮಕ್ಕಳಿಗೆ ಜಾತಿ ಎನ್ನುವುದು ಬಾಗಿಲುಗಳಿಲ್ಲದ ‘ಸೆರೆಮನೆ’ಯಂತಾಗಿದೆ. ಒಂದು ವೇಳೆ ಹುಡುಗಿಯೊಬ್ಬಳು ತನ್ನ ಇಷ್ಟದಂತೆ ನಡೆದುಕೊಂಡರೆ ಇಷ್ಟ ಬಂದವನ ಜೊತೆ ಹೋದರೆ, ಅದು ಗಂಡು ಹೆಣ್ಣಿನ ನಡುವಣ ಸಹಜ ಸಂಬಂಧವನ್ನು ಸ್ಥಾಪಿಸುವ ಒಂದು ಬಗೆಯೇ ಹೊರತು ದೋಷವಲ್ಲ ಎಂದ ಲೋಹಿಯಾ ಅವರ ಮಾತುಗಳ ಬಗ್ಗೆ ಸಮಾಜ ಯೋಚಿಸುವಂತಾಗಲಿ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಹೃದಯ ವಿಶಾಲವಾಗಿದ್ದರೆ ಮಾತ್ರ ಅಲ್ಲಿ ನಿಜವಾದ ಜ್ಞಾನ ಹೊಮ್ಮುತ್ತದೆ.
  —ಸ್ವಾಮಿ ವಿವೇಕಾನಂದ
- ಪ್ರಜಾಪ್ರಭುತ್ವ ಎಂದರೆ ದೇಶದ ಎಲ್ಲರ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯನ್ನು ಹಿಂಸಾತ್ಮಕ ಮಾರ್ಗವಿಲ್ಲದೆ ಕಾನೂನಿನ ಮೂಲಕ ಬದಲಾವಣೆಯನ್ನು ತರುವ ಸರ್ಕಾರದ ಒಂದು ಪದ್ಧತಿ.
  —ಅಂಬೇಡ್ಕರ್
- ಬೇಡುವವರಿಗೆ ವರವನ್ನು ನೀಡುವ ಯಾವ ಅಗೋಚರ ಶಕ್ತಿಯೂ ಜಗತ್ತಿನಲ್ಲಿ ಇಲ್ಲ. ವ್ಯಕ್ತಿ ತಾನೇ ತನ್ನ ಪರಿಶ್ರಮದಿಂದ ಗಳಿಸಬೇಕು.
  —ಗೌತಮ ಬುದ್ಧ
- ಇತಿಹಾಸ ಎಂಬುದು ಕೇವಲ ರಾಜ–ರಾಣಿಯರ ಕಥೆಯಲ್ಲ. ಕಾಲಕಾಲಕ್ಕೆ ಬದಲಾಗುತ್ತಾ ಬಂದ ಬದುಕು, ಅದರ ಕಾಲಧರ್ಮ ಅದರಿಂದ ಪ್ರಭಾವಿತರಾದ ಜನರ ರೀತಿನೀತಿಗಳು ಆ ಸಾಮಾಜಿಕ ವ್ಯವಸ್ಥೆಯ ಪ್ರಮುಖ ಶಕ್ತಿಗಳು, ಇತಿಹಾಸವನ್ನು ಬಿಂಬಿಸುವ ಮುಖ್ಯ ಅಂಶಗಳು.
  —ನಿರಂಜನ
- ಆತ್ಮವಿಶ್ವಾಸ ಮತ್ತು ಪರಿಶ್ರಮಗಳು ಸೋಲು ಎಂಬ ರೋಗವನ್ನು ಕೊಲ್ಲುವುದಕ್ಕೆ ಇರುವ ಅತ್ಯುತ್ತಮ ಔಷಧ. ಅದೇ ನಿಮ್ಮನ್ನು ಯಶಸ್ವಿ ವ್ಯಕ್ತಿಯನ್ನಾಗಿ ಮಾಡಬಲ್ಲವು.
  —ಎ.ಪಿ.ಜೆ. ಅಬ್ದುಲ್ ಕಲಾಂ